## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕಾರವಾರ

ಸಿ.ಸಿ. ನಂಃ 140/2014 ಪಿಡಬ್ಲೂಃ 3

ಸಿ.ಡಬ್ಲು ಃ 3

ಸಾಕ್ಷಿಧಾರರ ಹೆಸರು ಃ ನಾಗಾರಾಜ್ ಗಣಪತಿ ಚಂದಾವರ್

ವಯಸ್ಸು ಃ 38 ವರ್ಷ

ಉದ್ಯೋಗ ಃ ಅಂಗಡಿ ವ್ಯಾಪಾರ

ವಾಸ್ತವ್ಯ ಃ ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 17-12-2018

**ಸಾಕ್ಷಿದಾರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಹಿಂದಿ ಭಾಷೆ ಬಲ್ಲವರಾಗಿದ್ದು ವಕೀಲರು ಸಾಕ್ಷಿ ಹಿಂದಿಯಲ್ಲಿ ಹೇಳಿದ್ದನ್ನು ನ್ಯಾಯಾಧೀಶರಿಗೆ ಹಿಂದಿ ಬರುತ್ತಿದ್ದು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ ಮಾಡಿಕೊಳ್ಳಲಾಯಿತು)**

***ಮುಖ್ಯ ವಿಚಾರಣೆಃ ಶ್ರೀಮತಿ ಎಪಿಪಿಯವರಿಂದ ಃ-***

ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರತಿಸಿದ್ದರಿಂದ ಸದ್ರಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ನಿಪಿ-2 ಮೇಲೆ ಸಹಿಯನ್ನು ದಿಃ 27-03-2008 ರಂದು ಚಾಸಾ-1 ರವರ ಮನೆಯ ಮುಂದೆ ಮಾಡಿರುತ್ತೇನೆ. ಫಿರ್ಯಾದುದಾರಳ ಮನೆಯಲ್ಲಿ ಕಳ್ಳತನವಾಗಿದೆ ಎಂದು ಸಹಿ ಮಾಡಿರುತ್ತೇನೆ. ಪೊಲಿಸರು ಪಂಚಾನಮೆಯನ್ನು ಬರೆದಿದ್ದು ಅದಕ್ಕೆ ಸಹಿ ಮಾಡಲು ಹೇಳಿದ್ದರಿಂದ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯ ಸಮಯಕ್ಕೆ ಚಾಸಾ-2 ರವರು ಹಾಜರು ಇದ್ದು ಮುಮಾ-1 ನ್ನು ಜಪ್ತುಪಡಿಸಿಕೊಂಡರು. ಮುಮಾ-1 ನ್ನು ಚಾಸಾ-1 ರವರೇ ತೋರಿಸಿರುತ್ತಾರೆ. ನನ್ನೊಂದಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಪಂಚನಾಮೆಯನ್ನು ಸಂಜೆ 5-00 ಇಂದ 6-00 ಗಂಟೆಯವರೆಗೆ ಬರೆಯಲಾಯಿತು.

***ಪಾಟೀ ಸವಾಲುಃ ಶ್ರೀ ಪಿ ಬಿಟಿ ಯವರಿಂದ***

ಪಂಚನಾಮೆಯನ್ನು ಬರೆಯಲು ನಿರ್ದೆಶನ ಪೋಲಿಸರಿಗೆ ನಾನು ನೀಡಿಲ್ಲ ಎಂದರೆ ಸರಿ. ಪೋಲಿಸರು ಸಹಿ ಮಾಡಲು ಹೇಳಿದ್ದಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ. ಪೋಲಿಸರು ತೋರಿಸಿದನ್ನು ನೋಡಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪಂಚಾನಮೆಯನ್ನು ಪೋಲಿಸರು ನನಗೆ ಓದಿ ತಿಳಿಸಿದ್ದರು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಚಾಸಾ-1 ರವರನ್ನು 20 ವರ್ಷಗಳಿಂದ ನಾನು ಪರಿಚಯಿಸುತ್ತೇನೆ. ಘಟನಾ ಸ್ಥಳದಲ್ಲಿ ಪಂಚನಾಮೆ ಆಗಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ನನ್ನ ನೆರೆಹೊರೆಯವರಳಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಇಲ್ಲ.***

***(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು.)***

***ಓ. ಹೇ. ಕೇ. ಸರಿ ಇದೆ.***

ಹೆ. ಪ್ರ. ದ. ನ್ಯಾ. ದಂ. ಕಾರವಾರ